**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2209 |
| ಸದಸ್ಯರ ಹೆಸರು | ಶ್ರೀ ಐವನ್ ಡಿ'ಸೋಜಾ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 31.03.2020. |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2019-20 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಗಣಿಗಾರಿಕೆ ನಡೆಸಲು ಪರವಾನಿಗೆ ನೀಡಲಾಗಿದೆ. (ವಿವರ ನೀಡುವುದು) | 2019-20ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ನೀಡಲಾಗಿರುವ ಉಪಖನಿಜ ಗಣಿ ಗುತ್ತಿಗೆಗಳ / ತಾತ್ಕಾಲಿಕ ಪರವಾನಿಗೆಗಳ ವಿವರಗಳು ಈ ಕೆಳಕಂಡಂತಿವೆ: (see table below) |

| ಕ್ರ. ಸಂ. | ಉಪ ಖನಿಜದ ವಿಧ | ಗುತ್ತಿಗೆ ನೀಡಿರುವ ಸಂಖ್ಯೆ |
|---|---|---|
| 1 | ಕಟ್ಟಡ ಕಲ್ಲು | 01 |
| 2 | ಕೆಂಪು ಕಲ್ಲು | 03 |
| 3 | 22 ಮರಳು ದಿಬ್ಬಗಳಲ್ಲಿ ಮರಳು ತೆರವುಗೊಳಿಸಲು ನೀಡಿರುವ ತಾತ್ಕಾಲಿಕ ಪರವಾನಿಗೆ ಸಂಖ್ಯೆ (14.09.2019 ರ ಅಂತ್ಯದವರೆಗೆ) | 105 |
| 4 | Non CRZ ನದಿ ಪಾತ್ರಗಳ ವ್ಯಾಪ್ತಿಯಲ್ಲಿ ಟೆಂಡರ್-ಕಂ-ಇ-ಹರಾಜು ಮೂಲಕ ಮಂಜೂರು ಮಾಡಲಾದ ಮರಳು ಗುತ್ತಿಗೆಗಳ ಸಂಖ್ಯೆ | 14 |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಮರಳು ಬೇಡಿಕೆಗೆ ಅನುಸಾರವಾಗಿ ವಿತರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾರ್ಷಿಕ ಅಂದಾಜು 9 ಲಕ್ಷ ಮೆಟ್ರಿಕ್ ಟನ್ ಮರಳಿನ ಬೇಡಿಕೆ ಇರುತ್ತದೆ.<br>ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಬೇಡಿಕೆಗೆ ತಕ್ಕಂತೆ ಮರಳನ್ನು ಪೂರೈಸಲು ಜಿಲ್ಲಾ ಮರಳು ಸಮಿತಿಯ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>• ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ ನದಿ ಪಾತ್ರಗಳಲ್ಲಿ 14 ಮರಳು ಬ್ಲಾಕ್‌ಗಳನ್ನು ಜಿಲ್ಲೆಯ ಸಾಂಪ್ರದಾಯಿಕವಾಗಿ ಮರಳು ತೆಗೆಯುವ |

| | | |
|---|---|---|
| | | ಸಮುದಾಯದವರಿಗೆ ಸಾರ್ವಜನಿಕ ಟೆಂಡರ್–ಕಂ–ಇ–ಹರಾಜು ಮೂಲಕ ಮಂಜೂರು ಮಾಡಲಾಗಿರುತ್ತದೆ. ಸದರಿ ಮರಳು ಬ್ಲಾಕ್ ಗಳಲ್ಲಿ ಪರಿಸರ ಅನುಮತಿ ಪತ್ರದಂತೆ ವಾರ್ಷಿಕ ಅಂದಾಜು **3.45 ಲಕ್ಷ ಮೆಟ್ರಿಕ್ ಟನ್** ಗಣಿಗಾರಿಕೆ ಮಾಡಬಹುದಾದ ಮರಳಿನ ನಿಕ್ಷೇಪವಿದ್ದು, ಸದರಿ ಮರಳನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲು ಕ್ರಮ ವಹಿಸಲಾಗಿದೆ.<br>• ಮುಂದುವರೆದು, ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ನಿಯಂತ್ರಣ ವಲಯ ಹೊರತುಪಡಿಸಿದ ನದಿ ಪಾತ್ರಗಳಲ್ಲಿ **30** ಮರಳು ಬ್ಲಾಕ್‌ಗಳನ್ನು ಸಾರ್ವಜನಿಕ ಟೆಂಡರ್ ಕಂ–ಹರಾಜು ಪ್ರಕ್ರಿಯೆಗೆ ಒಳಪಡಿಸಲಾಗಿರುತ್ತದೆ. ಸದರಿ ಮರಳು ಬ್ಲಾಕ್‌ಗಳಲ್ಲಿ ವಾರ್ಷಿಕ ಅಂದಾಜು **8.00 ಲಕ್ಷ ಮೆಟ್ರಿಕ್ ಟನ್** ಮರಳು ಲಭ್ಯವಿದ್ದು, ಹರಾಜು ಪ್ರಕ್ರಿಯೆ ಪೂರ್ಣಗೊಂಡ ನಂತರ ಯಶಸ್ವಿ ಬಿಡ್ಡುದಾರರಿಂದ ಪರಿಸರ ಅನುಮತಿ ಪತ್ರ ಪಡೆದು, ಮರಳು ಗುತ್ತಿಗೆ ಮಂಜೂರು ಮಾಡಿ, ಸದರಿ ಮರಳು ಬ್ಲಾಕ್‌ಗಳಿಂದ ಮರಳನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲು ಕ್ರಮವಹಿಸಲಾಗುತ್ತಿದೆ.<br>• 04 ಮರಳು ಬ್ಲಾಕ್‌ಗಳನ್ನು ಸರ್ಕಾರಿ ಕಾಮಗಾರಿಗಳಿಗೆ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರ ನಿಯಮ 31-S ರಂತೆ ಕಾರ್ಯಾದೇಶ ನೀಡಲಾಗಿದ್ದು, ಸದರಿ ಮರಳು ಬ್ಲಾಕ್‌ಗಳಲ್ಲಿ ಪರಿಸರ ಅನುಮತಿ ಪತ್ರದಂತೆ ವಾರ್ಷಿಕ ಅಂದಾಜು **1.28 ಲಕ್ಷ ಮೆಟ್ರಿಕ್ ಟನ್** ಪ್ರಮಾಣದ ಮರಳಿರುತ್ತದೆ.<br>• ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ CRZ ನದಿ ಪಾತ್ರಗಳ ವ್ಯಾಪ್ತಿಯಲ್ಲಿ ಬ್ಯಾತಿಮೆಟ್ರಿಕ್ ಸರ್ವೇ ಕಾರ್ಯದ ಮೂಲಕ **13** ಮರಳು ದಿಬ್ಬಗಳನ್ನು ಗುರುತಿಸಿ, ಸದರಿ ಮರಳು ದಿಬ್ಬಗಳಲ್ಲಿ ಮರಳು ತೆರವುಗೊಳಿಸಲು NITK (National Institute of Technology Karnataka) ಸುರತ್ಕಲ್ ಇವರಿಂದ ತಾಂತ್ರಿಕ ವರದಿ ಪಡೆಯಲಾಗಿರುತ್ತದೆ. ಸದರಿ ವರದಿಯನ್ನು 07 ಜನ ಸದಸ್ಯರ ಜಿಲ್ಲಾ ಮರಳು ಸಮಿತಿಯಲ್ಲಿ ಮಂಡಿಸಿ, ಅನುಮೋದನೆ ಪಡೆಯಲಾಗಿದ್ದು, ಈ ಪ್ರಸ್ತಾವನೆಯನ್ನು ಜಿಲ್ಲಾ ಕರಾವಳಿ ವಲಯ ನಿರ್ವಹಣಾ ಸಮಿತಿಯ ಅನುಮೋದನೆಯೊಂದಿಗೆ ಕರ್ನಾಟಕ ಕರಾವಳಿ ನಿಯಂತ್ರಣ ವಲಯ ಪ್ರಾಧಿಕಾರಕ್ಕೆ ಪರಿಸರ ನಿರಾಕ್ಷೇಪಣಾ ಪತ್ರದ ಅನುಮತಿಗಾಗಿ ಸಲ್ಲಿಸಲಾಗಿರುತ್ತದೆ. ಪರಿಸರ ನಿರಾಕ್ಷೇಪಣಾ ಪತ್ರ ಬಂದ ನಂತರ ಸಾಂಪ್ರದಾಯಿಕ ಮರಳು ದಿಬ್ಬ ತೆರವುಗೊಳಿಸುವ ಸಮುದಾಯ ವ್ಯಕ್ತಿಗಳಿಗೆ ತಾತ್ಕಾಲಿಕ ಪರವಾನಿಗೆಯ ನೀಡಿ, ಮರಳು ದಿಬ್ಬಗಳನ್ನು ತೆರವುಗೊಳಿಸಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | • ದಕ್ಷಿಣ ಕನ್ನಡ ಜಿಲ್ಲೆಯ ತುಂಬೆ ಅಣೆಕಟ್ಟಿನ ಹಿನ್ನೀರಿನ ಪ್ರದೇಶದಲ್ಲಿ ಹೂಳು ತೆರವುಗೊಳಿಸಿರುವುದರಿಂದ ಸಂಗ್ರಹವಾಗಿರುವ ಅಂದಾಜು **86,000 ಮೆಟ್ರಿಕ್ ಟನ್** ಮರಳನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ "ಸ್ಯಾಂಡ್ ಬಜಾರ್ ಆಪ್" ಮೂಲಕ ಪೂರೈಸಲಾಗುತ್ತಿದೆ. |
| ಇ) | ಕೃತಕ ನೆರೆ ಉಂಟಾಗಲು ಮರಳು ಪ್ರಮಾಣವನ್ನು ತೆಗೆಯದೆ ಇರುವುದು ಕಾರಣ ಎಂದು ಹೇಳಲಾಗುತ್ತಿದ್ದು, ಈ ಬಗ್ಗೆ ಸರ್ಕಾರ ಅಧ್ಯಯನ ನಡೆಸಿದೆಯೇ; (ವಿವರ ನೀಡುವುದು) | ನದಿ ಪಾತ್ರಗಳಲ್ಲಿ ಸಂಗ್ರಹವಾಗಿರುವ ಮರಳನ್ನು ತೆರವುಗೊಳಿಸದೆ ಇದ್ದಲ್ಲಿ ವಾಡಿಕೆ ಪ್ರಮಾಣಕ್ಕಿಂತ ಅಧಿಕ ಮಳೆಯಾದ ಸಂದರ್ಭಗಳಲ್ಲಿ ನದಿಯಲ್ಲಿ ನೀರಿನ ಸರಾಗ ಚಲನೆಗೆ ಅಡ್ಡಿಯುಂಟಾಗಿ ಕೃತಕ ನೆರೆ ಉಂಟಾಗುವ ಸಂಭವವಿರುತ್ತದೆ. ಈ ಕುರಿತು ಸರ್ಕಾರದಿಂದ ಅಧ್ಯಯನ ನಡೆಸಿರುವುದಿಲ್ಲ. |
| ಈ) | ಕಲ್ಲು ಮತ್ತು ಜಲ್ಲಿಗಳಿಗೆ ಎಷ್ಟು ಪರವಾನಿಗೆ ನೀಡಲಾಗಿದೆ; ದರ ನಿಗದಿಪಡಿಸಲಾಗಿದೆಯೇ; (ವಿವರ ನೀಡುವುದು) | ವಿವರಗಳನ್ನು ಕ್ರ.ಸಂ. (ಅ) ರಲ್ಲಿ ನೀಡಲಾಗಿದೆ.<br>ಮುಂದುವರೆದು, 2019-20 ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ ಒಟ್ಟು **8,99,115 ಮೆಟ್ರಿಕ್ ಟನ್** ಪ್ರಮಾಣದ ಕಟ್ಟಡಕಲ್ಲು/ ಕೆಂಪುಕಲ್ಲು ಉಪ ಖನಿಜಗಳಿಗೆ ಸಾಗಾಣಿಗೆ ಪರವಾನಿಗೆ ನೀಡಲಾಗಿರುತ್ತದೆ.<br>ಕಟ್ಟಡ ಕಲ್ಲು ಉಪಖನಿಜಕ್ಕೆ ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2016 ರಂತೆ, ರಾಜಧನ ರೂ.**60**/-, ಸರಾಸರಿ ಹೆಚ್ಚುವರಿ ನಿಯತಕಾಲಿಕ ಮೊತ್ತ ರೂ.**30**/- ಹಾಗೂ ರಾಜಧನದ ಶೇ.**10** ರಷ್ಟು ಮೊತ್ತ ಅಂದರೆ ರೂ.**6**/-ಗಳನ್ನು ಜಿಲ್ಲಾ ಖನಿಜ ಪ್ರತಿಷ್ಠಾನ ನಿಧಿಗೆ ಗುತ್ತಿಗೆದಾರರುಗಳಿಂದ ಪಾವತಿಸಿಕೊಳ್ಳಲಾಗುತ್ತಿದೆ. |
| ಉ) | ಇಲಾಖೆ ಮೂಲಕ ಕಟ್ಟಡ ನಿರ್ಮಾಣಕ್ಕೆ ಬೇಕಾಗಿರುವ ಮರಳು, ಕಲ್ಲು ಮತ್ತು ಜಲ್ಲಿಗಳನ್ನು ಸರಬರಾಜು ಮಾಡಲು ಸರ್ಕಾರ ಮುಂದೆ ಪ್ರಸ್ತಾವನೆ ಇದೆಯೇ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು) | ಸರ್ಕಾರಿ ಅಥವಾ ಸರ್ಕಾರಿ ಸಂಸ್ಥೆಗಳ ಮೂಲಕ ಮರಳು ಸರಬರಾಜು ಮಾಡಲು ರಾಜ್ಯದಲ್ಲಿ ಮರಳು ನೀತಿ ಜಾರಿಗೆ ತರುವ ಕುರಿತು ರೂಪುರೇಷೆಗಳನ್ನು ಸರ್ಕಾರದಿಂದ ಸಿದ್ಧಪಡಿಸಲಾಗುತ್ತಿದೆ.<br>ಕಟ್ಟಡ ಕಲ್ಲು ಉಪಖನಿಜವನ್ನು ಇಲಾಖೆಯ ಮೂಲಕ ನಿರ್ಮಾಣ ಕಾಮಗಾರಿಗಳಿಗೆ ಸರಬರಾಜು ಮಾಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ಸಿಐ 629 ಎಂಎಂಎನ್ 2020

(ಸಿ.ಸಿ. ಪಾಟೀಲ)
ಗಣಿ ಮತ್ತು ಭೂವಿಜ್ಞಾನ ಸಚಿವರು.